# ಇರಬೇಕು ಹರಿದಾಸರ ಸಂಗ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 73.
2. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 50.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 83.
4. **Note:** Lyrics given without highlights are as per Ref. 1. The wordings given in yellow highlights are as per Ref. 2. The wordings in Ref. 3 are slightly different which are not considered here.
5. **Note:** Singer has followed Lyrics as in Ref. 1.

ರಾಗ: ಕಾಂಭೋಜ ತಾಳ: ಅಟ

| | |
|---|---|
| ಇರಬೇಕು ಹರಿದಾಸರ ಸಂಗ | ಇರಬೇಕು ಹರಿದಾಸರ ಸಂಗ |
| ಪರಮ ಜ್ಞಾನಿಗಳ ಸಂಪಾದಿಸಬೇಕು ‖ ಪ ‖ | ವರಜ್ಞಾನಿಗಳ ದಯ ಸಂಪಾದಿಸಬೇಕು |
| | |
| ಅತಿ ಜ್ಞಾನಿಯಾಗಬೇಕು, ಹರಿಕಥೆ ಕೇಳಬೇಕು | ಅತಿಜ್ಞಾನಿಯಾಗಿ ಹರಿಕಥೆಯ ಕೇಳಬೇಕು |
| ಯತಿಗಳ ಪಾದಕ್ಕೆ ಎರಗಬೇಕು | ಯತಿಗಳ ಪಾದಕ್ಕೆ ಎರಗಬೇಕು |
| ಸತಿ ಸುತರಿರಬೇಕು, ಅತಿ ಮೋಹ ಬಿಡಬೇಕು | ಸತಿ ಸುತರಿದ್ದು ಮಮತೆಯನು ಬಿಡಬೇಕು |
| ಮತಿಯೊಂದು ಬಿಡದೆ ಹರಿ ಪೂಜಿಪರ ಸಂಗ ‖ 1 ‖ | ಗತಿಯೆಂದು ಬಿಡದೆ ಹರಿಯ ಪೋಪರಸಂಗ |
| | |
| ನಡೆಯಾತ್ರೆ ಎನಬೇಕು, ನುಡಿ ನೇಮವಿರಬೇಕು | ನಡೆ ಯಾತ್ರಿಯೆನಬೇಕು ನುಡಿ ನೇಮವಿರಬೇಕು |
| ಬಿಡದೆ ಹರಿ ಪೂಜೆಯ ಮಾಡಬೇಕು | ಬಿಡದೆ ಹರಿಯ ಪೂಜೆಯ ಮಾಡಬೇಕು |
| ಅಡಿಗಡಿಗೆ ನೆನೆಬೇಕು, ಹರಿಗಡ್ಡಬೀಳಬೇಕು | ಅಡಿಗಡಿಗೆ ಬಂದು ಹರಿಗಡ್ಡ ಬೀಳಬೇಕು |
| ಬಿಡದೆ ಹರಿಭಜನೆ ಮಾಡುವರ ಸಂಗ ‖ 2 ‖ | ಬಿಡದೆ ಹರಿಭಜನೆಯ ಮಾಡುವರ ಸಂಗ |
| | |
| ಸುರ ಹರ ವಿರಿಂಚಿಗಳ ಪರಿಯ ತಿಳಿಯಲುಬೇಕು | ಹರಿ - ಹರ - ವಿರಂಚಿಯರ ಪರಿಯ ತಿಳಿಯಬೇಕು |
| ತಾರತಮ್ಯ ಪಂಚಭೇದ ತತ್ವ ನಿರತ | ತರತಮದಿ ರುದ್ರ – ಇಂದ್ರಾದಿಗಳ |
| ಅರಿಯದಿದ್ದರೆ ಗುರು ಹಿರಿಯರನೆ ಕೇಳಬೇಕು | ಅರಿಯದಿದ್ದರೆ ಗುರುಹಿರಿಯರ ಕೇಳಬೇಕು |
| ಪರಮಾನಂದದಿ ಲೋಲಾಡುವರ ಸಂಗ ‖ 3 ‖ | ಪರಮಾನಂದದಲಿ ಓಲಾಡುವರ ಸಂಗ |
| | |
| ಷಟ್ಕರ್ಮ ಮಾಡಬೇಕು, ವೈಷ್ಣವನೆನಿಸಬೇಕು | ಷಟ್ಕರ್ಮ ಮಾಡಬೇಕು ವೈಷ್ಣವನೊಲಿಸಬೇಕು ಉ – |
| ವಿಷ್ಣು ದಾಸರ ದಾಸನಾಗಬೇಕು | ತ್ಕೃಷ್ಟ ವೈರಾಗ್ಯ ಬೇಕು ದುಷ್ಟ ಸಂಗ ಬಿಡಬೇಕು |

| | |
|---|---|
| ಉತ್ಕೃಷ್ಟ ವೈರಾಗ್ಯ ಬೇಕು, ದುಷ್ಟ ಸಂಗ ಬಿಡಬೇಕು | ವಿಷ್ಣುವಿನ ದಾಸರ ದಾಸನಾಗಲು ಬೇಕು |
| ಎಷ್ಟು ಕಷ್ಟ ಬಂದರು ವಿಷ್ಣು ಭಜಿಪರ ಸಂಗ ‖ 4 ‖ | ಎಷ್ಟು ಕಷ್ಟಬಂದರೂ ಹರಿಯ ಭಜಿಪರ ಸಂಗ |
| | |
| ಏಕಾಂತ ಕೊಡಬೇಕು, ಲೋಕ ವಾರ್ತೆ ಬಿಡಬೇಕು | ಏಕಾಂತ ಕುಳ್ಳಿರ ಬೇಕು ಲೋಕವಾರ್ತೆ ಬಿಡಬೇಕು |
| ಲೋಕೈಕನಾಥನ ಭಜಿಸಬೇಕು | ಲೋಕೈಕನಾಥನ ಭಜಿಸ ಬೇಕು |
| ಸಾಕು ಸಂಸಾರವೆಂದು ಕಕುಲಾತಿ ಬಿಡಬೇಕು | ಸಾಕು ಸಂಸಾರವೆಂದು ಕಕ್ಕುಲತೆ ಬಿಡಬೇಕು |
| ಶ್ರೀಕಾಂತ ಪುರಂದರ ವಿಠಲ ದಾಸರ ಸಂಗ ‖ 5 ‖ | ಶ್ರೀಕಾಂತ ಪುರಂದರ ವಿಠಲ ರಾಯನ ಸಂಗ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹರಿದಾಸರ ನಡವಳಿಯನ್ನೇ ಈ ಹಾಡು ವಿವರಿಸುತ್ತದೆ.

**ನಡೆ ಯಾತ್ರೆ –** ನಡೆಯುವಾಗ ಯಾತ್ರೆಯೆಂಬ ಭಾವನೆಯಿರಬೇಕು. ವ್ಯಾಸರಾಯ ಸ್ವಾಮಿಗಳ "ನಡೆ ಶ್ರೀ ಹರಿಯ ಯಾತ್ರೆ" ಎಂಬ ಮಾತನ್ನು ಗಮನಿಸಬೇಕು. ಇದು ಬಿಂಬಾನುಸಂಧಾನದ ಪ್ರಕಾರ.

**ವಿರಿಂಚಿ** = ಬ್ರಹ್ಮ

**ಪರಿ** = ಸ್ನಾನ

**ಸುರ ಹರ ವಿರಂಚಿಗಳ ಪರಿಯ... –** ತಾರತಮ್ಯ ಕ್ರಮದಿಂದ ಜೀವನಿಗೆ ಬಿಂಬ ರೂಪರಾದ ದೇವತೆಗಳೆಲ್ಲರಿಗೂ ಹರಿಯೇ ಬಿಂಬರೂಪವಾಗಿರುವ ತತ್ತ್ವವನ್ನು ತಿಳಿಯಬೇಕು.

**ಷಟ್ಕರ್ಮ–** ಆರು (೬) ಕರ್ಮಗಳು, ಅಧ್ಯಯನ, ಅಧ್ಯಾಪನ, ಯಜನ, ದಾನ, ಪ್ರತಿಗ್ರಹ.

ಅಧ್ಯಯನಂ, ಅಧ್ಯಾಪನಂ, ಯಜನಂ, ಯಾಜನಂ ತಥಾ ।
ದಾನಂ, ಪ್ರತಿಗೃಹಂ ಚೈವ ಬ್ರಹ್ಮಣಾ ನಾಮ ಕಲ್ಪಯತ್ ॥

(ಮನುಸ್ಮೃತಿ)

**ಕಕುಲಾತಿ –** ಕಕ್ಕುಲತೆ, ಪ್ರೀತಿ.

**Classification:** Keerthane
**Ankita:** purandara vittala
**Location:** NA
**Category:** Jeevana Sutra
**Sub-Category:** jnana, patni, putra, moha, puje, Krishna, bhajane, brahma, taratamya, tatva, karma, Vishnu, vairagya, loka, samsara, varthe,
**Pravachana:** NA
**Explanation:** NA